ಲಲಿತ ಮಂಟಪ

ಅಮೂರ್ತ ಚಿತ್ರಕಲೆಯಂತೆ ನೃತ್ಯವೂ ಅಮೂರ್ತ ಆಗಬಾರದೇಕೆ?

ಕೋಡಿಬೆಟ್ಟು ರಾಜಲಕ್ಷ್ಮಿ

ಕುಮುದಿನಿ ಲಾಖಿಯಾ ಅಹಮದಾಬಾದ್ ಮೂಲದವರು (ಜನನ: 1930ರ ಮೇ 17). ಗುರುಗಳಿಂದ ಸಾಂಪ್ರದಾಯಿಕ ಕಥಕ್ ಶಾಸ್ತ್ರೀಯ ನೃತ್ಯವನ್ನು ಕಲಿತಿರುವ ಅವರು ವಿದೇಶಗಳ ನೃತ್ಯ ಪ್ರಸ್ತುತಿಯನ್ನು ಅಭ್ಯಸಿಸಿ ಕಥಕ್ ನೃತ್ಯದಲ್ಲಿ ಕೊರಿಯೊಗ್ರಫಿ ಮಾಡಿದ್ದಾರೆ. ಕಥಕ್ ನೃತ್ಯದ ಶಾಸ್ತ್ರೀಯ ಅಂಶಗಳಿಗೆ ಧಕ್ಕೆ ಬಾರದಂತೆ, ಆದರೆ ವೇದಿಕೆಯಲ್ಲಿ ನೃತ್ಯದ ಒಟ್ಟಂದವನ್ನು ಹೆಚ್ಚಿಸುವುದಕ್ಕೆ ಪೂರಕವಾದ ಸಕಾರಾತ್ಮಕ ಅಂಶಗಳನ್ನು ಅಳವಡಿಸಿಕೊಳ್ಳುವ ಧೈರ್ಯ ತೋರಿದವರು. ಏಕವ್ಯಕ್ತಿ ಪ್ರದರ್ಶನಗಳ ಪದ್ಧತಿಗೆ ಸೀಮಿತವಾಗಿದ್ದ ಕಥಕ್ ನೃತ್ಯವನ್ನು ಬಹುಕಲಾವಿದರು ಸಾಂಘಿಕವಾಗಿ ವೇದಿಕೆಯಲ್ಲಿ ಪ್ರಸ್ತುತಪಡಿಸುವಂತೆ ಕೊರಿಯೊಗ್ರಫಿ ಪರಿಚಯಿಸಿದರು. ಇದರಿಂದಾಗಿ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಕಥಕ್ ಹೊಸ ಸ್ವರೂಪದೊಂದಿಗೆ ಪ್ರಸ್ತುತಗೊಂಡಿತು. ಅವರ ಶಿಷ್ಯಬಳಗವು ಈ ಸಂಯೋಜಿತ ನೃತ್ಯ ಪ್ರಸ್ತುತಿಯ ಪರಂಪರೆಯನ್ನು ಮುಂದುವರೆಸುತ್ತ ಹೋದ ಪರಿಣಾಮ ಪ್ರಸ್ತುತ ಕಥಕ್ ನೃತ್ಯ ಪ್ರಕಾರದ ವರ್ಚಸ್ಸು ಹೆಚ್ಚಿದೆ. ‘ಧಬ್‌ಕರ್’, ‘ಯುಗಳ್’, ‘ಅಥ ಕಿಮ್’ ಮುಂತಾದ ನೃತ್ಯ ಪ್ರಸ್ತುತಿಗಳು ಜನಪ್ರಿಯಗೊಂಡಿವೆ.

ಲಖ್ನೋ ಘರಾಣೆಯ ಶಂಭು ಮಹಾರಾಜ್ ಸೇರಿದಂತೆ ಅನೇಕ ಗುರುಗಳ ಬಳಿ ಕುಮುದಿನಿ ಅಭ್ಯಾಸ ಮಾಡಿದವರು. ಸ್ವಾತಂತ್ರ್ಯ ಪೂರ್ವದ ಭಾರತವನ್ನು ನೋಡಿದ ಅವರು ನೃತ್ಯ ಕ್ಷೇತ್ರದ ಏಳುಬೀಳುಗಳ ಬಗ್ಗೆ ಸಮರ್ಥವಾಗಿ ಮಾತನಾಡಬಲ್ಲವರು. ಭಾರತೀಯ ನೃತ್ಯ ಸಂಗೀತ ಕಲಿಕೆಗಾಗಿ ‘ಕದಂಬ ಸೆಂಟರ್ ಫಾರ್ ಡಾನ್ಸ್ ಆಂಡ್ ಮ್ಯುಸಿಕ್’ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸಾವಿರಾರು ಮಂದಿ ಶಿಷ್ಯರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಅವರೆಲ್ಲರ ಪಾಲಿಗೆ ಅವರು ಪ್ರೀತಿಯ ಕುಮಿಬೆನ್‌ಜೀ. 1987ರಲ್ಲಿ ಅವರಿಗೆ ಭಾರತ ಸರ್ಕಾರವು ಪದ್ಮಶ್ರೀ ನೀಡಿ ಪುರಸ್ಕರಿಸಿದೆ. ಮುಂಬೈಯಲ್ಲಿ ನೆಲೆಸಿರುವ ಅವರೊಡನೆ ‘ಮಯೂರ’ಕ್ಕಾಗಿ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.